# ಝೆನ್ ಅನುಭಾವ - ೨

❑ ಜಿ.ಎಸ್. ಜಯದೇವ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಝೆ**ನ್ ಬಗ್ಗೆ ನಾವು ಎಷ್ಟು ತಾತ್ವಿಕವಾಗಿ ಮಾತನಾಡಿದರೂ ಅದರ ಅಂತರಾಳದ ತಿರುಳು ನಮಗೆ ಹೊಳೆಯಬೇಕಾದರೆ ಝೆನ್ ಗುರುಗಳ ಮಾತು, ರೀತಿ-ನೀತಿಗಳು, ಅವರ ಮನುಷ್ಯಸಂಬಂಧದ ವೈಖರಿ ಮುಂತಾದುವನ್ನು ತಿಳಿಯಬೇಕು. ಈಗ ಕೆಲವು ಝೆನ್ ಗುರುಗಳ ಘಟನೆಗಳನ್ನು ನೋಡೋಣ.

ಬೋಧಿಧರ್ಮ ಎಂಬ ಭಾರತದ ಬೌದ್ಧ ಸಂನ್ಯಾಸಿ ಐದನೇ ಶತಮಾನದಲ್ಲಿ ಹಡಗಿನ ಮುಖಾಂತರ ಚೈನಾ ದೇಶಕ್ಕೆ ಬಂದು ತಲುಪಿದ. ಇವನೇ ಝೆನ್ ಧರ್ಮದ ಪ್ರವರ್ತಕ ಎನ್ನುತ್ತಾರೆ. ಬೋಧಿಧರ್ಮ ಚೈನಾಕ್ಕೆ ಬರುವ ಮುನ್ನವೆ ಬೌದ್ಧಧರ್ಮ ಚೈನಾದಲ್ಲಿ ಪ್ರಸಿದ್ಧವಾಗಿತ್ತು. ಅಲ್ಲಿಯ ಒಬ್ಬ ರಾಜ ಬೌದ್ಧನಾಗಿದ್ದ. ಬೋಧಿಧರ್ಮನನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿ ಹೇಳಿದ: "ನಾನು ಸಿಂಹಾಸನ ಏರಿದಾಗಿನಿಂದ ಸಂನ್ಯಾಸಿಗಳನ್ನು ಪೋಷಿಸಿದ್ದೇನೆ, ದೇವಸ್ಥಾನಗಳನ್ನು ಕಟ್ಟಿಸಿದ್ದೇನೆ, ವಿಹಾರಗಳನ್ನು ಕಟ್ಟಿಸಿದ್ದೇನೆ, ಶಾಸ್ತ್ರಗ್ರಂಥಗಳನ್ನು ಪ್ರತಿ ಮಾಡಿ ಹಂಚಿಸಿದ್ದೇನೆ. ಇದೆಲ್ಲದರಿಂದಲೂ ನಾನು ಪಡೆದಿರುವ ಅಭಿವೃದ್ಧಿ ಎಷ್ಟಿರಬಹುದು?"

ಆಗ ಬೋಧಿಧರ್ಮ ಹೇಳಿದ: " ರಾಜ, ನೀನು ಈಗ ಹೇಳಿದ್ದೆಲ್ಲ ನೀನು ಹೊರಗೆ ಮಾಡಿದ ಕೆಲಸಗಳು, ಇದರಿಂದ ನಿನಗೆ ವೈಯಕ್ತಿಕವಾಗಿ ಏನು ಪ್ರಯೋಜನವಾದೀತು? ಪರಿಶುದ್ಧವಾದ ವಿವೇಕವನ್ನು ಪಡೆಯುವುದೇ ನಿಜವಾದ ಪ್ರಯೋಜನ. ಶೂನ್ಯದಲ್ಲಿ ಉಂಟಾಗುವ ಸ್ತಬ್ಧತೆಯೇ ಇದರ ಮೂಲಸ್ವರೂಪ. ಇದನ್ನು ನೀನು ಕೇವಲ ಹೊರಗಿನ ಕೆಲಸಗಳಿಂದ ಪಡೆಯಲಾರೆ." ಈ ಮಾತು ರಾಜನಿಗೆ ಹಿಡಿಸಲಿಲ್ಲ. ೯ನೇ ದಿನದ ಹೊತ್ತಿಗೆ ರಾಜನಿಗೂ ತನಗೂ ಉಂಟಾಗುತ್ತಿದ್ದ ಅಂತರವನ್ನು ಮನಗಂಡು ಬೋಧಿಧರ್ಮ ಅರಮನೆಯನ್ನು ತ್ಯಜಿಸಿ ಹೊರಟುಹೋದ.

ರಾಜನಿಗೆ ಬೌದ್ಧ ಸಂನ್ಯಾಸಿಯನ್ನು ಪುನಃ ನೋಡಬೇಕೆನಿಸಿತು. ಮಂತ್ರಿಯನ್ನು ಕರೆದು ಸಂನ್ಯಾಸಿಯನ್ನು ಹುಡುಕಿ ಕರೆಸು ಎಂದ. ಮಂತ್ರಿ ಬಹಳ ಬುದ್ಧಿವಂತ. ಅವನು ಹೇಳಿದ: "ರಾಜ, ನೀನು ಅವನ ಕಡೆ ನೋಡಿದೆ, ಆದರೆ ಕಾಣಲಾರದೆ ಹೋದೆ, ನೀನು ಅವನನ್ನು ಸಂಧಿಸಿದೆ, ಆದರೆ ಗುರುತಿಸಲಿಲ್ಲ. ಈಗ ಅವನನ್ನು ಕರೆಸುವುದು ಸಾಧ್ಯವಿಲ್ಲ, ಅವನು ಎಲ್ಲೋ ದೂರ ಹೋಗಿಬಿಟ್ಟಿದ್ದಾನೆ."

***

ಹುಯಿನೆಂಗ್ ಎಂಬ ಒಬ್ಬ ನಿರಕ್ಷರಕುಕ್ಷಿ ಝೆನ್ ಗುರುವಾದ ಕಥೆ ಇದೆ. ಝೆನ್ ಅನುಭಾವಕ್ಕೆ ಪುಸ್ತಕದ ವಿದ್ಯೆ ಬೇಕೇಬೇಕೆಂಬ



ನಿಯಮವೇನೂ ಇಲ್ಲ. ಹುಯಿನೆಂಗ್ ಚಿಕ್ಕ ಹುಡುಗನಾಗಿದ್ದಾಗ ತಂದೆಯನ್ನು ಕಳೆದುಕೊಂಡ. ಇವನು ಮರ ಕಡಿದು, ಸೌದೆ ಮಾರಿ ವಿಧವೆಯಾದ ತನ್ನ ತಾಯಿಯನ್ನು ಸಾಕುತ್ತಿದ್ದ. ಹಾಗಾಗಿ ಇವನಿಗೆ ಶಾಲೆಗೆ ಹೋಗಲಾಗಲಿಲ್ಲ. ನಿರಕ್ಷರಕುಕ್ಷಿಯಾಗಿದ್ದರೂ ಪ್ರಾಮಾಣಿಕನಾದ ಕಾರಣ ಎಲ್ಲರೂ ಇವನನ್ನು ಪ್ರೀತಿಸುತ್ತಿದ್ದರು. ಒಂದು ದಿನ ದಾರಿಹೋಕನೊಬ್ಬ ಬೌದ್ಧಸೂತ್ರವನ್ನು ಪಠಿಸುತ್ತಾ ಹೇಳುತ್ತಿದ್ದ: "ಓ ಮನಸ್ಸೇ, ಯಾವುದೂ ನಿನ್ನನ್ನು ಬಂಧಿಸದಿರಲಿ, ಮೇಲೇರು, ಮೇಲೇರು." ಇದು ಹುಯಿನೆಂಗ್‌ನ ಕಿವಿಗೆ ಬಿತ್ತು. ಅವನು ದಾರಿಹೋಕನನ್ನು ಕೇಳಿದ : "ಸ್ವಾಮಿ, ನೀವು ಪಠಿಸುತ್ತಿರುವುದು ಏನು?" ಆಗ ಆತ ಹೇಳಿದ : "ಇದು ಡೈಮಂಡ್ ಸೂತ್ರದ ಮಂತ್ರ. ಇದನ್ನು ಬೋಧಿಧರ್ಮ ಸ್ಥಾಪಿಸಿದ ಆಶ್ರಮದಲ್ಲಿ ಕಲಿತೆ. ಅದು ಬಹುದೂರ ಉತ್ತರದಲ್ಲಿ ಎತ್ತರವಾದ ಬೆಟ್ಟದ ಮೇಲಿದೆ." ಹುಯಿನೆಂಗ್

ಇದ್ದುದು ದಕ್ಷಿಣದಲ್ಲಿ. ಅವನಿಗೆ ತಾನು ಬೌದ್ಧಧರ್ಮವನ್ನು ಕಲಿಯಬೇಕೆಂದು ಆಸೆಯಾಯಿತು. ಅವನು ತನ್ನ ವೃದ್ಧ ತಾಯಿಯನ್ನು ಒಬ್ಬ ಒಳ್ಳೆಯ ಜವಾಬ್ದಾರಿಯುತ ಮನುಷ್ಯನೊಬ್ಬನಿಗೆ ಒಪ್ಪಿಸಿ ಉತ್ತರದ ಕಡೆಗೆ ನಡೆದೇಬಿಟ್ಟ. ಕೊನೆಗೆ ಬೆಟ್ಟದ ಮೇಲಿನ ಆಶ್ರಮವನ್ನು ಸೇರಿ, ಅಲ್ಲಿದ್ದ ಗುರುಗಳಿಗೆ ನಮಸ್ಕರಿಸಿದ. ಗುರುಗಳು ಕೇಳಿದರು: "ಯಾರು ನೀನು? ಇಲ್ಲಿಗೇಕೆ ಬಂದೆ?" ಹುಯಿನೆಂಗ್ ಹೇಳಿದ: "ನಾನು ದಕ್ಷಿಣ ಪ್ರಾಂತ್ಯದಿಂದ ಬಂದಿದ್ದೇನೆ. ನನಗೆ ಬೌದ್ಧಧರ್ಮ ಕಲಿಯಬೇಕೆಂಬ ಆಸೆ." ಆಗ ಗುರು ಹೇಳಿದ : "ಅಯ್ಯೋ, ದಕ್ಷಿಣ ಪ್ರಾಂತ್ಯದ ಜನ ನಿರಕ್ಷರಕುಕ್ಷಿಗಳು, ಅನಾಗರಿಕರು. ನೀನು ಹೇಗೆ ತಾನೆ ಬೌದ್ಧಧರ್ಮವನ್ನು ಕಲಿಯಬಲ್ಲೆ?" ಹುಯಿನೆಂಗ್ ದಿಟ್ಟತನದಿಂದ ಮರುಪ್ರಶ್ನೆ ಮಾಡಿದ : "ಸ್ವಾಮಿ, ಸಾಮಾನ್ಯವಾಗಿ ದೇಹ, ಆಕಾರಗಳ ಸಂಬಂಧದಲ್ಲಿ ಜನ ಉತ್ತರ-ದಕ್ಷಿಣ ಎಂದು ಗುರುತಿಸುವುದನ್ನು ನೋಡಿದ್ದೇನೆ. ಈ ಭೇದ-ಭಾವ ಮನಸ್ಸಿಗೂ ಅನ್ವಯಿಸುವುದುಂಟೆ?"

ಗುರುವಿಗೆ ಆಶ್ಚರ್ಯವಾಯಿತು. ಹೇಳಿದ : "ನೀನು ದಕ್ಷಿಣದ ಅನಾಗರಿಕನಾದರೂ ನಿನ್ನ ಬುದ್ಧಿ ಚುರುಕಾಗಿದೆ. ಸದ್ಯಕ್ಕೆ ನಿನ್ನನ್ನು ನಮ್ಮ ಬತ್ತದ ಗಿರಣಿಗೆ ಹಾಕುತ್ತೇನೆ. ಅಲ್ಲಿ ಕಲ್ಲು ತಿರುಗಿಸಿ ಬತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡು." ಹುಯಿನೆಂಗ್ ಅದನ್ನೇ ಮಹಾಪ್ರಸಾದವೆಂದು ಒಪ್ಪಿಕೊಂಡ. ಎಂಟು ತಿಂಗಳು ಕಳೆಯಿತು. ಗುರುಗಳು ಎಲ್ಲ ಶಿಷ್ಯರನ್ನೂ ಒಟ್ಟಿಗೆ ಸೇರಿಸಿ,"ನೀವು ಪಡೆದುಕೊಂಡಿರುವ ಅಧ್ಯಾತ್ಮ ಅನುಭವಗಳ ಬಗ್ಗೆ ಒಂದು ಸಣ್ಣ ಪದ್ಯ ಬರೆಯಿರಿ. ಈ ಪದ್ಯದ ಆಧಾರದ ಮೇಲೆ ನಿಮ್ಮಲ್ಲಿ ಯಾರು ಗುರುವಾಗಬಲ್ಲರು ಎಂಬುದನ್ನು ನಾನು ಗುರುತಿಸುತ್ತೇನೆ ಮತ್ತು ಅವನಿಗೆ ಗುರುಪರಂಪರೆಯ ದಂಡವನ್ನು ಕೊಡುತ್ತೇನೆ. ಹೀಗೆ ಮುಂದಿನ ಗುರು ಧರ್ಮವನ್ನು ಮುಂದಕ್ಕೆ ಕೊಂಡೊಯ್ಯುತ್ತಾನೆ" ಎಂದು ತಿಳಿಸಿದರು. ಶಿಷ್ಯರಲ್ಲಿ ಅನೇಕರು ಪದ್ಯಗಳನ್ನು ಬರೆದು ಗೋಡೆಯ ಮೇಲೆ ತೂಗುಹಾಕಿದರು. ಶಿಷ್ಯರಲ್ಲಿ ಶಂಕ್ಸಿ ಬಹಳ ಬುದ್ಧಿವಂತನೆಂದೂ, ಅವನಿಗೇ ಗುರುಪೀಠ ಸಿಕ್ಕುವುದೆಂದೂ ಎಲ್ಲರೂ ಭಾವಿಸಿದ್ದರು. ಶಂಕ್ಸಿ ಗೋಡೆಯ ಮೇಲೆ ತನ್ನ ಪದ್ಯವನ್ನು ಬರೆದ. ಅದು ಹೀಗಿತ್ತು:

ದೇಹವೆಂಬುದೊಂದು ಬೋಧಿವೃಕ್ಷ
ಮನಸ್ಸೆಂಬುದೊಂದು ನಿಲುವುಗನ್ನಡಿ
ಆದ್ದರಿಂದ ಯಾವಾಗಲೂ ಅದನ್ನು ಒರೆಸಿ ಶುಚಿಯಾಗಿಡಿ
ಧೂಳು ಎಂದೂ ಬೀಳದಂತೆ ಜಾಗ್ರತೆ ವಹಿಸಿ.

ಹುಯಿನೆಂಗ್ ಈ ಪದ್ಯವನ್ನು ಇತರರು ಹೇಳುತ್ತಿದ್ದುದನ್ನು ಕೇಳಿಸಿಕೊಂಡ. ಅವನು ಹೇಳಿದ: "ಈ ಪದ್ಯ ಬರೆದ ಆಸಾಮಿ ಇನ್ನೂ ಅಪಕ್ವ. ಇದಕ್ಕಿಂತಲೂ ಹೆಚ್ಚಾದ ಪದ್ಯವನ್ನು ನಾನು ಹೇಳುತ್ತೇನೆ, ಬರೆಯಿರಿ." ಬಹಳ ಜನ ನಕ್ಕರು. ನಿರಕ್ಷರಕುಕ್ಷಿಯಾದ ಹುಯಿನೆಂಗ್ ತನ್ನ ಬುದ್ಧಿ ಮೀರಿ ಮಾತನಾಡುತ್ತಿದ್ದಾನೆಂದು ಭಾವಿಸಿದರು. ಆದರೂ ಕೆಲವರು ಹುಯಿನೆಂಗ್ ಹೇಳಿದ ಪದ್ಯವನ್ನು ಗೋಡೆಯ ಮೇಲೆ ಬರೆದರು. ಅದು ಹೀಗಿತ್ತು:

ವಿವೇಕ ಎಂಬುದು ಎಂದೂ ವೃಕ್ಷವಾಗಿರಲಿಲ್ಲ
ಪ್ರಕಾಶಮಾನವಾದ ಕನ್ನಡಿಗೆ ನಿಲುವೇ ಇರಲಿಲ್ಲ
ಅಲ್ಲಿ ಏನೂ ಇರುವ ಸಾಧ್ಯತೆಯೇ ಇಲ್ಲ.
ಆದ್ದರಿಂದ ಧೂಳು ಬೀಳುವುದಾದರೂ ಎಲ್ಲಿ?

ಹುಯಿನೆಂಗ್‌ನ ಪದ್ಯ ಓದಿ ಕೆಲವರಿಗೆ ಆಶ್ಚರ್ಯವಾಯಿತು. ಶಂಕ್ಸಿ ಬರೆದ ಪದ್ಯಕ್ಕಿಂತ ಹೆಚ್ಚು ಅರ್ಥಗರ್ಭಿತವಾಗಿದೆ ಎನ್ನಿಸಿತು. ಆದರೂ ಪಾಂಡಿತ್ಯ ಇಲ್ಲದ ಹುಯಿನೆಂಗ್ ಗುರುವಾಗಲು ಹೇಗೆ ಸಾಧ್ಯ ಎಂದು ಭಾವಿಸಿದರು. ಆಶ್ರಮದ ಗುರು ಹುಯಿನೆಂಗ್‌ನ ಪದ್ಯ ಓದಿ ಮುಂದಿನ ಉತ್ತರಾಧಿಕಾರಿಯಾಗಲು ಹುಯಿನೆಂಗ್ ಸೂಕ್ತ ವ್ಯಕ್ತಿ ಎಂದು ನಿರ್ಧರಿಸಿಬಿಟ್ಟ. ಆದರೆ ಎಲ್ಲರಿಗೂ ತಿಳಿಯುವಂತೆ ಗುರುದಂಡವನ್ನು ವರ್ಗಾಯಿಸಿ ಹುಯಿನೆಂಗ್ ಮುಂದಿನ ಗುರು ಎಂದು ಘೋಷಿಸಿದರೆ ತನ್ನ ಶಿಷ್ಯರು ತನ್ನ ಮೇಲೆ ತಿರುಗಿ ಬೀಳುವರು ಎಂದು ಗುರುವಿಗೆ ಅನ್ನಿಸಿತು. ಆದ್ದರಿಂದ ಗುರು ಒಂದು ಉಪಾಯ ಮಾಡಿದ. ಹುಯಿನೆಂಗ್‌ನಿಗೆ ಮಧ್ಯರಾತ್ರಿ ಎಲ್ಲರೂ ಮಲಗಿದ ಮೇಲೆ ಗರ್ಭಗುಡಿಗೆ ಬರಲು ಹೇಳಿದ. ಅದರಂತೆ ಗರ್ಭಗುಡಿಯಲ್ಲಿ ಗುರು ಹುಯಿನೆಂಗ್ ಸಂಧಿಸಿದರು. ಗುರು ಹೇಳಿದ : "ಬೋಧಿಧರ್ಮ ಬಂದನಂತರ ನೀನೇ ೬ನೇ ಧರ್ಮಗುರು. ಏಕೆಂದರೆ ನೀನು ಧರ್ಮವನ್ನು ಅರಿತಿರುವೆ. ಬೋಧಿಧರ್ಮ ಬೋಧಿಸಿದಾಗ ತುಂಬ ಜನಕ್ಕೆ ಅವನೇನು ಬೋಧಿಸಿದ ಎಂದು ತಿಳಿಯಲಿಲ್ಲ. ಹಾಗಾಗಿ ಈ ದಂಡವನ್ನು ವರ್ಗಾಯಿಸುವುದು ಒಂದು ಸಂಪ್ರದಾಯವಾಯಿತು. ನೀನೀಗ ಇದನ್ನು ಪಡೆದಿದ್ದೀಯೆ. ಆದರೆ ಹೀಗೆ ಅಧಿಕಾರ ವಹಿಸಿಕೊಟ್ಟಾಗ ಕಲಹ ಹುಟ್ಟುವುದು ಸಹಜ. ಆದ್ದರಿಂದ ನೀನು ಈಗಲೇ ಈ ಭಾಗವನ್ನು ಬಿಟ್ಟು ನಿನ್ನ ದಕ್ಷಿಣ ಭಾಗಕ್ಕೆ ಹೊರಟುಹೋಗು. ಅಲ್ಲಿಯ ಜನರಿಗೆ ಬೋಧಿಸು." ಹೀಗೆ ಹೇಳಿ ಗುರು ಶಿಷ್ಯನನ್ನು ದೋಣಿಯಲ್ಲಿ ಕೂರಿಸಿಕೊಂಡು ಹೇಳಿದ: "ಈಗ ನಾನು ನಿನ್ನನ್ನು ಆ ಕಡೆಗೆ ಸಾಗಿಸಿಕೊಡುತ್ತೇನೆ." ಆಗ ಶಿಷ್ಯ ಹೇಳಿದ : "ನಾನು ಮೊದಲು ಅಜ್ಞಾನದಿಂದ ನಿಮ್ಮ ಬಳಿಗೆ ಬಂದಾಗಲೆ ನೀವು ನನ್ನನ್ನು ಮತ್ತೊಂದು ದಡಕ್ಕೆ ಸಾಗಿಸಿಬಿಟ್ಟಿದ್ದೀರಿ. ಈಗ ನಾನೇ ಹುಟ್ಟನ್ನು ಹಾಕುತ್ತೇನೆ." ಹೀಗೆ ಹೇಳಿ ಶಿಷ್ಯ ಗುರುವಿನಿಂದ ದೋಣಿಯ ಹುಟ್ಟನ್ನು ಪಡೆದುಕೊಂಡ.

ಹೀಗೆ ಶಿಷ್ಯನನ್ನು ಕಳುಹಿಸಿ ಬಂದನಂತರ ಗುರು ತನ್ನ ಮಠದ ಶಿಷ್ಯರನ್ನೆಲ್ಲಾ ಒಟ್ಟಿಗೆ ಸೇರಿಸಿ ಹೇಳಿದ: "ನೋಡಿ, ನಾನು ಒಬ್ಬ ಸೂಕ್ತ ವ್ಯಕ್ತಿಯನ್ನು ಆರಿಸಿ ಅವನಿಗೆ ಗುರುದಂಡವನ್ನು ಕೊಟ್ಟಿದ್ದೇನೆ. ಆ ದಕ್ಷಿಣದ ಮನುಷ್ಯ ದಕ್ಷಿಣಾಭಿಮುಖವಾಗಿ ಹೊರಟುಹೋದ." ಶಿಷ್ಯರಿಗೆಲ್ಲಾ ಸಿಟ್ಟು ಬಂತು. ಅವನು ಯಾರಿರಬಹುದೆಂದು ಊಹಿಸಿದರು. ಹುಯಿನೆಂಗ್‌ನಂತಹ ನಿರಕ್ಷರಕುಕ್ಷಿಗೆ, ಅನಾಗರಿಕನಿಗೆ, ಅಯೋಗ್ಯನಿಗೆ ಗುರುದಂಡ ದೊರೆತುಹೋಗಿದೆ, ಅವನೆಲ್ಲಿದ್ದರೂ ಹುಡುಕಿ, ಅವನಿಂದ ದಂಡವನ್ನು ಹಿಂದಕ್ಕೆ ಪಡೆಯೋಣ ಎಂದು ಶಿಷ್ಯರು ಕೂಗಾಡಿದರು. ಗುರು ಹೇಳಿದ : "ಅವನು ಆಗಲೇ ಬಹುದೂರ ಹೊರಟುಹೋಗಿದ್ದಾನೆ." ಆದರೂ ಶಿಷ್ಯರು ಬಿಡಲಿಲ್ಲ.

ಕುದುರೆಗಳನ್ನು ಏರಿ ಹುಯಿನೆಂಗ್‌ನನ್ನು ಹುಡುಕಿಕೊಂಡು ಹೊರಟರು. ಆದರೆ ಹುಯಿನೆಂಗ್ ಯಾರ ಕಣ್ಣಿಗೂ ಬೀಳಲಿಲ್ಲ. ಅವನು ೧೫ ವರ್ಷ ಮೌನವಾಗಿದ್ದು ನಂತರ ಧರ್ಮವನ್ನು ಬೋಧಿಸಲು ಪ್ರಾರಂಭಿಸಿದ.

ಶಂಕ್ಸಿ ಮತ್ತು ಹುಯಿನೆಂಗ್‌ನ ಪದ್ಯಗಳನ್ನು ಹೋಲಿಸಿದರೆ ಒಂದು ತೋತಾಪುರಿಯ ಭಾವನೆಯ ಹಾಗೆ, ಮತ್ತೊಂದು ರಾಮಕೃಷ್ಣ ಪರಮಹಂಸರ ಅನುಭವದಂತೆ ಕಾಣುತ್ತವೆ. ತೋತಾಪುರಿ ಹೇಳುತ್ತಿದ್ದ: "ಹಿತ್ತಾಳೆಯ ಲೋಟವನ್ನು (ಮನಸ್ಸು) ದಿನವೂ ಬೆಳಗಬೇಕು, ಏಕೆಂದರೆ ಕಿಲುಬು ಕುಳಿತುಕೊಂಡುಬಿಡುತ್ತದೆ. " ಆದರೆ ರಾಮಕೃಷ್ಣರು ಹೇಳುತ್ತಿದ್ದರು: "ಲೋಟ ಚಿನ್ನದ್ದಾದರೆ ಕಿಲುಬು ಎಲ್ಲಿಂದ ತಾನೆ ಬರಲು ಸಾಧ್ಯ?"

ಹುಯಿನೆಂಗ್ ತನ್ನ ಶಿಷ್ಯರಿಗೆ ಅನೇಕ ಬುದ್ಧಿಮಾತುಗಳನ್ನು ಹೇಳಿದ್ದಾನೆ. ಅವನು ಹೇಳುತ್ತಾನೆ : "ಪುಸ್ತಕದಿಂದ ನಿಜವಾದ ಜ್ಞಾನ ದೊರೆಯುವುದಿಲ್ಲ. ಆದರೆ ಒಂದು ಶ್ರೇಷ್ಠವಾದ ಮನಸ್ಸು ಇನ್ನೊಂದು ಮನಸ್ಸಿಗೆ ತಾನು ಪಡೆದುಕೊಂಡ ವಿವೇಕವನ್ನು ವರ್ಗಾಯಿಸಬಲ್ಲದು. ಶ್ರೇಷ್ಠವಾದ ಗುರು ತಾನು ಪಡೆದುಕೊಂಡ ಪರಮೋಚ್ಚ ಜ್ಞಾನಾನುಭವವನ್ನು ತನ್ನ ಶಿಷ್ಯನಿಗೆ ನೇರವಾಗಿ ತುಂಬಲಾರ. ಬಹಳ ಹೆಚ್ಚೆಂದರೆ ಅವನು ಸೂಲಗಿತ್ತಿಯ ಕೆಲಸ ಮಾಡಬಹುದು. ಒಳ್ಳೆಯ ಸಮಯ ಕಾದು ತನ್ನ ಸಹಾಯಹಸ್ತವನ್ನು ಚಾಚಬಹುದು." ಮತ್ತೆ ಹೇಳುತ್ತಾನೆ : "ನಾವು ಶಾಸ್ತ್ರವಾಕ್ಯಗಳಿಗೆ ಅಂಟಿಕೊಳ್ಳಬಾರದು ಅಥವಾ ನಮ್ಮ ವಾಕ್ಯಗಳಿಂದಲೇ ಮತ್ತೊಬ್ಬರು ಬದಲಾಗುತ್ತಾರೆ ಎಂದೂ ಭಾವಿಸಬಾರದು."

ಹುಯಿನೆಂಗ್ ಮನಸ್ಸಿನ ಬಗ್ಗೆ ಹೀಗೆ ಹೇಳುತ್ತಾನೆ : "ನಾವು ನಮ್ಮ ಮನಸ್ಸನ್ನು ಹೃತ್ಪೂರ್ವಕವಾಗಿ ಖಾಲಿ ಮಾಡಿಕೊಳ್ಳಬೇಕು. ಕೇವಲ ಯಾಂತ್ರಿಕವಾಗಿ ಖಾಲಿ ಮಾಡಿಕೊಂಡು ಸಂಪಾದಿಸಿದ ಶೂನ್ಯ ಶಾಶ್ವತವಾಗಿ ಇರಲಾರದು. ಅಥವಾ ಅದಕ್ಕೆ ನಾವು ಅಂಟಿಕೊಳ್ಳುವ ಸಂಭವವಿದೆ. ಶೂನ್ಯಕ್ಕೂ ನಾವು ಅಂಟಿಕೊಳ್ಳಬಾರದು. ಯಾಂತ್ರಿಕವಾಗಿ ಮನಸ್ಸನ್ನು ಖಾಲಿ ಮಾಡಿಕೊಂಡವರು ಶಾಸ್ತ್ರಗ್ರಂಥಗಳನ್ನು ಅಗೌರವದಿಂದ ಕಾಣಬಹುದು. ಅಥವಾ ಅವುಗಳನ್ನು ಬೆಂಕಿಗೆ ಹಾಕಬಹುದು. ಶಾಸ್ತ್ರವಾಕ್ಯಗಳನ್ನು ನಿರಾಕರಿಸಿದರೆ ನಾವು ಎಲ್ಲಾ ವಾಕ್ಯಗಳನ್ನೂ ನಿರಾಕರಿಸಬೇಕಾಗುತ್ತದೆ. ಇದಕ್ಕೆ ಬದಲಾಗಿ ನಿನ್ನ ಮನಸ್ಸಿನ ಕಡೆಗೆ ನೇರವಾಗಿ ಲಕ್ಷ್ಯವಿಡು. ಈ ಮನಸ್ಸಿನಿಂದಲೇ ಸಾಕ್ಷಾತ್ಕಾರ ಪಡೆಯಬಹುದು. ಈ ಮನಸ್ಸಿನಿಂದಲೇ ನಾವು ನರಕಕ್ಕೆ ಹೆಜ್ಜೆ ಇಡಬಹುದು." ಅವನು ಮತ್ತೆ ಹೇಳುತ್ತಾನೆ: "ಯಾರೇ ಆಗಲಿ, ತನ್ನ ಸಂಸಾರವನ್ನು ತ್ಯಾಗ ಮಾಡಿ, ಮಠಕ್ಕೆ ಸೇರಿಕೊಂಡನೆ ಎಂಬ ವಿಷಯ ಗೌಣ. ಆದರೆ ಮುಖ್ಯವಾಗಿ ಬೇಕಾದದ್ದು ಇವನು ನಿರ್ಲಿಪ್ತನಾಗಿದ್ದಾನೆಯೇ? ಎಂಬುದು. ನೀನು ಹೊರಗಿನ ವಸ್ತುವಿಗೆ ಅಂಟಿಕೊಂಡಿದ್ದೇ ಆದರೆ ನೀನೊಂದು ಅಲೆಯಂತೆ, ಲಾಭ-ನಷ್ಟಗಳನ್ನು ಅನುಭವಿಸುತ್ತಾ ಇರುತ್ತೀಯೆ. ಕೇವಲ ಕೆಟ್ಟದ್ದನ್ನು ಮಾತ್ರ ತ್ಯಜಿಸಿದರೆ ಸಾಲದು. ಒಳ್ಳೆಯದನ್ನೂ ತ್ಯಾಗ ಮಾಡಿಬಿಡಬೇಕು. ಒಳಿತು-ಕೆಡಕುಗಳಿಗೆ ಅತೀತನಾಗಿರಬೇಕು."

ಹುಯಿನೆಂಗ್‌ನ ಬೋಧನೆಗಳು ಚೀನಾದಲ್ಲಿ ದಕ್ಷಿಣದ ಬೋಧನೆಗಳೆಂದೇ ಪ್ರಸಿದ್ಧಿಯಾದವು. ಕಾರಣವೇನೆಂದರೆ ಬಹುಶಃ ಅವನು ದಕ್ಷಿಣ ಪ್ರಾಂತ್ಯದಲ್ಲಿ ನೆಲೆಸಿದ್ದರಿಂದ.

***

ಗುಯಿಷೆನ್ ಎಂಬ ಗುರುವಿನ ಬಳಿ ತೀವ್ರ ಹುಡುಕಾಟದಲ್ಲಿದ್ದ ಒಬ್ಬ ಶಿಷ್ಯ ಕೆಲವು ಪ್ರಶ್ನೆಗಳನ್ನು ಕೇಳಿದ. ಅದಕ್ಕೆ ಗುರು ಗುಯಿಷೆನ್ ಹೇಳಿದ : "ನೀನು ಬಹಳ ಬುದ್ಧಿವಂತ ಎಂದು ಕೇಳಿದ್ದೇನೆ. ಒಂದು ಪ್ರಶ್ನೆಗೆ ಹತ್ತು ಉತ್ತರ ಕೊಡುತ್ತೀಯಂತೆ, ಹತ್ತು ಪ್ರಶ್ನೆಗಳಿಗೆ ನೂರು ಉತ್ತರ ಕೊಡುತ್ತೀಯಂತೆ. ಆದರೆ ನನ್ನದೊಂದು ಪ್ರಶ್ನೆ ಇದೆ. ನಿನ್ನ ತಂದೆ-ತಾಯಿಯರು ಹುಟ್ಟುವ ಮೊದಲು ನೀನೇನಾಗಿದ್ದೆ? ಇದಕ್ಕೆ ಉತ್ತರ ನಿನ್ನ ಬಳಿ ಇದೆಯೇ?" ಏಕೋ ಏನೋ ಈ ಪ್ರಶ್ನೆ ಶಿಷ್ಯನ ತಲೆಯನ್ನು ಕೊರೆಯಹತ್ತಿತು. ಅವನು ಶಾಸ್ತ್ರಗ್ರಂಥಗಳನ್ನೆಲ್ಲಾ ತಿರುವಿಹಾಕಿದ. ಆದರೆ ಸೂಕ್ತ ಉತ್ತರ ಸಿಗಲಿಲ್ಲ. ಕೊನೆಗೆ ಆತ ಭಾವಿಸಿದ : "ಈ ಪುಸ್ತಕಗಳಿಂದೇನು ಪ್ರಯೋಜನ? ಪುಸ್ತಕದಲ್ಲಿ ಬರೆದಿರುವ ಬಿಸ್ಕತ್ತನ್ನು ತಿನ್ನಬಹುದೇ?" ಹೀಗೆ ಯೋಚಿಸಿ ಪುನಃ ಗುರುವಿನ ಬಳಿಗೆ ಹಿಂದಿರುಗಿದ. ದಯಮಾಡಿ ಉತ್ತರವನ್ನು ನೀವೇ ಹೇಳಿ ಎಂದು ಬೇಡಿದ. ಅದಕ್ಕೆ ಗುರು ಹೇಳಿದ : "ನಾನೇನಾದರೂ ನಿನಗೆ ಉತ್ತರ ಹೇಳಿದರೆ ಮುಂದೊಂದು ದಿನ ನೀನು ನನ್ನ ಮೇಲೆ ಸಿಟ್ಟು ಮಾಡಿಕೊಳ್ಳುತ್ತೀಯೆ. ಒಂದು ವೇಳೆ ನಾನು ನಿನಗೆ ಹೇಳಿದರೂ ಅದು ನನಗೆ ಸೇರಿದ ಉತ್ತರವಾಗುತ್ತದೆ. ಅದೆಂದಿಗೂ ನಿನ್ನ ಉತ್ತರವಾಗುವುದಿಲ್ಲ." ಆಗ ಶಿಷ್ಯನಿಗೆ ಶಾಸ್ತ್ರಗ್ರಂಥಗಳ ಮೇಲೆ ಸಂಪೂರ್ಣ ವೈರಾಗ್ಯ ಬರುತ್ತದೆ. ಅವುಗಳನ್ನೆಲ್ಲಾ ಎಸೆದು ಪರಿವ್ರಾಜಕನಾಗಿ ಹಳೆಯ ದೇವಸ್ಥಾನಗಳಲ್ಲಿ ಸ್ವಲ್ಪಕಾಲ ಕಳೆಯುತ್ತಾನೆ. ನಂತರ ತನ್ನ ಪಾಂಡಿತ್ಯದ ಅಹಂಕಾರವನ್ನೆಲ್ಲಾ ತ್ಯಜಿಸಿ ಜಮೀನಿನಲ್ಲಿ ಕೆಲಸ ಮಾಡತೊಡಗುತ್ತಾನೆ. ಹೀಗೆ ಕೆಲಸ ಮಾಡುವಾಗ ಮುರಿದ ಹಂಚೊಂದು ಸಿಗುತ್ತದೆ. ಅದನ್ನು ತೆಗೆದು ಹಿಂದಕ್ಕೆ ಎಸೆಯುತ್ತಾನೆ. ಆಗ ಅದು ಒಂದು ಬಿದಿರುಗಿಡಕ್ಕೆ ಬಿದ್ದು, ಅಲ್ಲಿ ಟೊಳ್ಳು ಬಿದಿರಿಗೆ ತಾಗಿ ಟಾಂ... ಎಂದು ಓಂಕಾರ ಉಂಟುಮಾಡಿತು. ಈ ಶಬ್ದ ಅವನ ಮನದ ಅಂತರಾಳದಲ್ಲಿ ಮುಚ್ಚಿದ್ದ ಬಾಗಿಲೊಂದನ್ನು ತೆರೆಯುತ್ತದೆ. ಈ ಘಟನೆಯಿಂದಾಗಿ ಅವನು ಸಾಕ್ಷಾತ್ಕಾರ ಪಡೆಯುತ್ತಾನೆ. ನಂತರ ತನ್ನ ಗುರುವಿಗೆ ಮನದಲ್ಲೇ ವಂದಿಸಿ ಹೇಳುತ್ತಾನೆ: "ಓ ಸದ್ಗುರುವೇ, ನೀನು ಪ್ರಶ್ನೆಗೆ ಉತ್ತರ ಹೇಳದೆ ಎಂತಹ ಮಹದುಪಕಾರ ಮಾಡಿದೆ. ನೀನು ಯಾವುದಾದರೂ ಉತ್ತರ ಹೇಳಿದ್ದರೆ ಅಷ್ಟಕ್ಕೇ ತೃಪ್ತನಾಗಿ ನಾನು ಸುಮ್ಮನಾಗಿ ಬಿಡುತ್ತಿದ್ದೆ. ಈ ಸಾಕ್ಷಾತ್ಕಾರ ನನಗೆ ತಪ್ಪಿ ಹೋಗುತ್ತಿತ್ತು." ಈ ಘಟನೆಯನ್ನು ಕೇಳಿದ ಗುರು ಹೇಳಿದ : "ಓ ಅವನು ಆ ಶಬ್ದವನ್ನು ಕೇಳಿದ ಕೂಡಲೇ ಶಬ್ದ ಮತ್ತು ತನಗೆ ಇರುವ ಭೇದದ ಅಂತ್ಯವನ್ನು ಕಂಡುಕೊಂಡ. ಹಾಗಾಗಿ ಅವನು ಶಬ್ದದೊಡನೆ ಒಂದಾದ. ನಂತರ ಇಡೀ ವಿಶ್ವದ ಜೊತೆಯಲ್ಲೇ ಒಂದಾಗಿಬಿಟ್ಟ."

***

ಸೇನಾಧಿಪತಿಯೊಬ್ಬ ಝೆನ್ ಗುರುವಿಗೆ ನಮಸ್ಕರಿಸಿ ಕೇಳುತ್ತಾನೆ: "ಪೂಜ್ಯರೆ. ನಿಜವಾಗಿಯೂ ಸ್ವರ್ಗ-ನರಕಗಳೆಂಬುವು ಇವೆಯೇ?" ಆಗ ಗುರು ಕೇಳಿದ, "ಅಯ್ಯಾ, ನೀನು ಜೀವನಯಾಪನಕ್ಕೆ ಏನು ಮಾಡುತ್ತೀಯ?" ಎಂದು. ಆಗ ಸೇನಾಧಿಪತಿ ಹೇಳಿದ, "ನಾನೊಬ್ಬ ಸೈನ್ಯದ ಅಧಿಕಾರಿ." ಎಂದು. ಆಗ ಗುರು ಆತನನ್ನು ಅಣಕಿಸುತ್ತಾ ಹೇಳಿದ : "ನಿನ್ನನ್ನು ಯಾರು ತಾನೆ ಸೇನಾಧಿಪತಿಯಾಗಿ ನೇಮಿಸಿಕೊಂಡರು. ನೀನೊಬ್ಬ ಕಸಾಯಿ ಅಂಗಡಿಯ ಕೆಲಸಗಾರನಂತೆ ಕಾಣುತ್ತೀಯ!" ಕುಪಿತಗೊಂಡ ಸೇನಾಧಿಪತಿ ತನ್ನ ಕತ್ತಿಯನ್ನು ಹಿರಿದು "ಆ! ಏನೆಂದೆ? ನಿನ್ನನ್ನು ತುಂಡು ತುಂಡು ಮಾಡಿಬಿಡುತ್ತೇನೆ" ಎಂದು ಗುಡುಗಿದ. ತಕ್ಷಣ ತಡ ಮಾಡದೆ ಗುರು ಹೇಳಿದ, "ಇದೇ ನರಕದ ಬಾಗಿಲು" ಎಂದು. ಸೇನಾಧಿಪತಿಗೆ ತನ್ನ ತಪ್ಪಿನ ಅರಿವಾಯಿತು. ತಕ್ಷಣ ಕತ್ತಿಯನ್ನು ಒಳಗೆ ಸೇರಿಸಿ "ಪೂಜ್ಯರೆ, ನನ್ನ ಉದ್ಧಟತನವನ್ನು ಕ್ಷಮಿಸಿ" ಎಂದು ಬೇಡಿದ. ತಕ್ಷಣ ಗುರು ಹೇಳಿದ, "ನೋಡು, ಇದೇ ಸ್ವರ್ಗದ ಬಾಗಿಲು" ಎಂದು. ಆಗ ಸೇನಾಧಿಪತಿಗೆ ಅರಿವಾಯಿತು, ಸ್ವರ್ಗ-ನರಕಗಳು ಈಗಲೇ ಇಲ್ಲೇ ಇವೆ, ನಮ್ಮ ಮನಃಸ್ಥಿತಿಗೆ ತಕ್ಕಂತೆ ಸ್ವರ್ಗದ ಬಾಗಿಲು ಅಥವಾ ನರಕದ ಬಾಗಿಲು ತೆರೆಯುತ್ತದೆ.

ಝೆನ್ ಗುರುವೊಬ್ಬ ತನ್ನ ನಾಲ್ಕು ಜನ ಶಿಷ್ಯರನ್ನು ಕೂರಿಸಿಕೊಂಡು ಒಂದು ಪ್ರಶ್ನೆ ಕೇಳಿದ : "ಇಬ್ಬರು ಮಳೆಯಲ್ಲಿ ನಡೆಯುತ್ತಾ ಇದ್ದರು. ಒಬ್ಬನು ಮಾತ್ರ ಒದ್ದೆಯಾಗಲಿಲ್ಲ. ಏಕೆಂದು ಹೇಳಬಲ್ಲಿರಾ?" ಒಬ್ಬ ಶಿಷ್ಯ ಹೇಳಿದ, "ಒಬ್ಬನು ದಪ್ಪನಾದ ದುಪ್ಪಟಿ ಹೊದ್ದಿದ್ದ" ಎಂದು. ಮತ್ತೊಬ್ಬ ಹೇಳಿದ, "ಬಹುಶಃ ಒಬ್ಬ ಮನೆಗಳಿಂದ ಹೊರಚಾಚಿದ್ದ ಸಜ್ಜಗಳ ಕೆಳಗೆ ನಡೆಯುತ್ತಿದ್ದ" ಎಂದು. ಮತ್ತೊಬ್ಬ ಹೇಳಿದ, "ಬಹುಶಃ ಮಳೆ ವಿರಳವಾಗಿ ಬಿದ್ದು ಒಬ್ಬನ ಮೇಲೆ ಮಾತ್ರ ಬಿದ್ದು ಮತ್ತೊಬ್ಬನ ಮೇಲೆ ಬೀಳಲಿಲ್ಲ" ಎಂದು.

ಆಗ ಗುರು ಹೇಳಿದ : "ನಿಮ್ಮ ಗಮನವೆಲ್ಲಾ ಒಬ್ಬ ನೆನೆಯಲಿಲ್ಲ ಎಂಬ ಕಡೆಗೇ ಕೇಂದ್ರೀಕೃತವಾಗಿದೆ. ಒಬ್ಬ ನೆನೆದಿಲ್ಲ ಎಂದರೆ ಇಬ್ಬರೂ ನೆನೆದಿರಬಾರದೇಕೆ?" ಹೀಗೆ ನೀವು ಮಾತಿನ ಯಾವುದೋ ಒಂದು ಭಾಗವನ್ನು ಮಾತ್ರ ಗಮನಿಸುತ್ತೀರಿ. ಬೆರಳು ಚಂದ್ರನ ಕಡೆ ತೋರಿದರೆ, ಬೆರಳನ್ನು ನೋಡಿದರೆ ಚಂದ್ರ ಕಾಣುವುದೇ? ಬೆರಳನ್ನು ಬಿಟ್ಟು ಚಂದ್ರನನ್ನು ನೋಡಬೇಕು."

ಸೇನಾಧಿಪತಿಯೊಬ್ಬನಿಗೆ ತಾನು ಪಕ್ವವಾಗಿದ್ದೇನೆಂದು ಮತ್ತು ತನ್ನ ಸಂಸಾರ ತ್ಯಾಗ ಮಾಡಿ ಝೆನ್ ಧರ್ಮವನ್ನು ಅರಿಯಬೇಕೆಂದು ಅನ್ನಿಸಿತು. ಆಗ ಅವನು ತನ್ನ ಹೆಂಡತಿ ಮಕ್ಕಳನ್ನೆಲ್ಲಾ ತ್ಯಜಿಸಿ ಬೆಟ್ಟದ ಮೇಲಿದ್ದ ಝೆನ್ ಆಶ್ರಮಕ್ಕೆ ತೆರಳಿದ. ಅಲ್ಲಿ ಝೆನ್ ಗುರುವಿಗೆ ನಮಸ್ಕರಿಸಿ ಹೇಳಿದ : "ಸ್ವಾಮಿ ನನ್ನ ಮನಸ್ಸು ಪಕ್ವವಾಗಿದೆ. ನನಗೆ ಸಂಸಾರ ರುಚಿಸುತ್ತಿಲ್ಲ. ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ." ಆಗ ಝೆನ್ ಗುರು ಹೇಳಿದ: "ಅಯ್ಯಾ, ಇನ್ನೂ ಕೆಲವು ಕಾಲ ನೀನು ಸಂಸಾರದಲ್ಲಿ ಇದ್ದು ಬಾ, ನಿನಗಿನ್ನೂ ಕಾಲ ಬಂದಿಲ್ಲ." ಆಗ ಸೇನಾಧಿಪತಿ ಗುರುವಿಗೆ ನಮಸ್ಕರಿಸಿ ಸಂಸಾರಕ್ಕೆ ಮರಳಿದ. ಹೀಗೆ ಕೆಲವು ಕಾಲವಾದ ನಂತರ ಪುನಃ ಅವನು ಗುರುವಿನ ಬಳಿ ಬಂದು ಹೇಳಿದ : "ಈಗ ನನ್ನ ಮನಸ್ಸು ಪಕ್ವವಾಗಿದೆ. ನೀವು ಏನು ಹೇಳಿದರೂ ನಾನು ಸಂಸಾರಕ್ಕೆ ಹಿಂದಿರುಗುವವನಲ್ಲ." ಆಗ ಗುರು ವಿಕಟ ನಗೆಯೊಂದನ್ನು ಬೀರಿ ಹೇಳಿದ : "ಅಯ್ಯಾ, ಬೆಳಿಗ್ಗೆ ಇಷ್ಟು ಬೇಗ ಎದ್ದು ಮನೆ ಬಿಟ್ಟುಬಂದಿದ್ದೀಯಲ್ಲ, ನಿನ್ನ ಹೆಂಡತಿ ಈಗಾಗಲೇ ಮತ್ತೊಬ್ಬನೊಡನೆ ಮಲಗಿದ್ದಾಳೆ." ಇದನ್ನು ಕೇಳಿದ ಸೇನಾಧಿಪತಿಗೆ ವಿಪರೀತ ಸಿಟ್ಟು ಬಂತು. ಕತ್ತಿ ಹಿಡಿದು "ಮೂಢ, ನಿನ್ನ ತಲೆಯನ್ನು ಚಚ್ಚಿಬಿಡುತ್ತೇನೆ" ಎಂದ. ತಕ್ಷಣ ಗುರು ಹೇಳಿದ : "ಮಗು, ಇದಕ್ಕೇ ನಾನು ಹೇಳಿದ್ದು, ನಿನಗಿನ್ನೂ ಕಾಲ ಬಂದಿಲ್ಲ ಎಂದು. ಇನ್ನೂ ಸ್ವಲ್ಪಕಾಲ ಬಿಟ್ಟು ಬಾ." ಸೇನಾಧಿಪತಿಗೆ ತನ್ನ ತಪ್ಪಿನ ಅರಿವಾಯಿತು. ಕ್ಷಮಾಪಣೆ ಕೇಳಿ ಮನೆಗೆ ಹಿಂದಿರುಗಿದ.

ಅಕ್ಕಮಹಾದೇವಿಯ ವಚನವೊಂದು ಹೀಗಿದೆ:

ಹಣ್ಣು ಬಿಟ್ಟ ಬಳಿಕ ಆ ಮರನಾರು ತರಿದೊಡೇನು?
ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿದೊಡೇನು?
ಮಣ್ಣು ಬಿಟ್ಟ ಬಳಿಕ ಆ ಕೆಯ್ಯನಾರು ಉತ್ತಡೇನು?

ಇಂತಹ ತ್ಯಾಗ ಸಾಧ್ಯವಾಗದಾಗ ತನ್ನ ಮನೆಯಲ್ಲಿರುವುದೇ ಲೇಸು. ಹಾಗಾಗಿ ಗುರು ಸೇನಾಧಿಪತಿಯನ್ನು ಮನೆಗೆ ಹೋಗಲು ಹೇಳಿದ.

ನಾನಿನ್ ಎಂಬ ಝೆನ್ ಗುರುವೊಬ್ಬನಿದ್ದ. ಅವನ ಬಳಿಗೆ ಉದ್ದಾಮ ಪಂಡಿತನೊಬ್ಬ ಝೆನ್ ಅರಿಯಲು ಬಂದ. ಗುರು ಪಂಡಿತನಿಗೆ ಆತಿಥ್ಯ ನೀಡುತ್ತಾ ಚಹಾ ಕಪ್ಪಿಗೆ ಚಹಾ ಹಾಕಿಕೊಡಲು ಪಾತ್ರೆಯನ್ನು ಬಗ್ಗಿಸಿದ. ಲೋಟ ತುಂಬಿ ಚಹಾ ಹೊರಗೆ ಸುರಿಯತೊಡಗಿತು. ಆದರೂ ಗುರು ಸುರಿಯುವುದನ್ನು ನಿಲ್ಲಿಸಲಿಲ್ಲ. ಇದನ್ನು ನೋಡಿದ ಪಂಡಿತ ಕೂಗಿದ, "ಮಹಾಶಯ, ಲೋಟ ತುಂಬಿ ಸುರಿಯುತ್ತಿದೆ. ನಿನಗೆ ಕಾಣುತ್ತಿಲ್ಲವೆ?" ಆಗ ಗುರು ನಕ್ಕು ಹೇಳಿದ, "ನೀನೂ ಸಹ ಈ ಚಹಾ ಕಪ್ಪಿನ ಹಾಗೆ, ನಿನ್ನ ತುಂಬಾ ನಿನ್ನದೇ ವಿಚಾರಗಳನ್ನು ತುಂಬಿಕೊಂಡಿದ್ದೀಯ. ಮೊದಲು ನೀನು ಅವುಗಳನ್ನು ಖಾಲಿ ಮಾಡಿಕೊಳ್ಳದಿದ್ದರೆ ನಾನು ನಿನಗೆ ಝೆನ್ ಬಗ್ಗೆ ತಿಳಿಸುವುದಾದರೂ ಹೇಗೆ?"

ನಾವು ನಮ್ಮದೇ ವಿಚಾರಗಳಿಂದ, ನಿರ್ಧಾರಗಳಿಂದ ತುಂಬಿಕೊಂಡಿರುತ್ತೇವೆ. ಕಲಿತದ್ದನ್ನು ಖಾಲಿ ಮಾಡಿಕೊಳ್ಳುವುದೇ ಒಂದು ದೊಡ್ಡ ವಿಚಾರ. ಸ್ವಾಮಿ ವಿವೇಕಾನಂದರು ಇಂತಹ ಸ್ಥಿತಿಯನ್ನು ಅನುಭವಿಸುತ್ತಾರೆ. ಪುಸ್ತಕಗಳನ್ನೆಲ್ಲ ಗಂಗೆಗೆ ಹಾಕಿ, ಕಲಿತಿರುವ ವಿಷಯಗಳಿಂದ ಮುಕ್ತನಾಗುವುದೇ ಒಂದು ಅದ್ಭುತ ಸಂಗತಿ ಎಂದು ಶ್ರೀರಾಮಕೃಷ್ಣರಲ್ಲಿ ಹೇಳಿಕೊಳ್ಳುತ್ತಾರೆ.

◆